

ಡಾ.ವಿನೋದ ಛೆಬ್ಬಿ

**ಚಿಕ್ಕ ಸಮಸ್ಯೆಯೊಂದು ವಿಕೋಪಕ್ಕೆ ಹೋಗಲು ನಂಟು ಹೇಗೆ ಕಾರಣವಾಗುತ್ತದೆ?**

# 32: ಭದ್ರತಾಭಾವ–ಏಕಾಂಗಿಭಾವ

ಸೈಮನ್ ಹಾಗೂ ಸಿಮೋನಾ (ಹೆಸರುಗಳು ಕಾಲ್ಪನಿಕ) ಅವಿವಾಹಿತ ಜೋಡಿ. ಭದ್ರ ಬಾಂಧವ್ಯದಲ್ಲಿದ್ದು ನಾಲ್ಕು ವರ್ಷಗಳೇ ಕಳೆದಿವೆ. ಆದರೆ ಇನ್ನೂ ಪರಸ್ಪರ ಮದುವೆಯಾಗಲು ಮನವೊಪ್ಪಿಲ್ಲ. ಅಡ್ಡಿ ಏನೆಂದು ಇಬ್ಬರಿಗೂ ಸ್ಪಷ್ಟವಾಗಿಲ್ಲ. ಪರಸ್ಪರ ಬದ್ಧರಾಗಿದ್ದರೂ ದಾಂಪತ್ಯದ ಮಟ್ಟಿಗೆ ಇವರ ಇಚ್ಛಾಶಕ್ತಿ ಮುಂದುವರಿದಿಲ್ಲ. ಅದಕ್ಕಾಗಿ ನನ್ನನ್ನು ಭೇಟಿ ಮಾಡಿದ್ದಾರೆ. ಇವರ ಕತೆಯೇನು?

ಸೈಮನ್ ಭದ್ರಭಾವದವನು (ನೋಡಿ ಕಂತು: 27). ಸಿಮೋನಾ ಏಕಾಂಗಿಭಾವದವಳು (ನೋಡಿ ಕಂತು 29). ಇಬ್ಬರೂ ಸಹಪಾಠಿಗಳು. ಕಾಲೇಜಿನಲ್ಲಿ ಎಲ್ಲರೊಡನೆ ಬೆರೆತರೂ ತನ್ನಷ್ಟಕ್ಕೆ ತಾನಿರುವ ಸಿಮೋನಾಳ ಬಗೆಗೆ ಸೈಮನ್‌ಗೆ ಆಸಕ್ತಿ ಬೆಳೆಯಿತು. ಇಬ್ಬರಿಗೂ ಸಾಕಷ್ಟು ಸ್ನೇಹಿತವರ್ಗವಿದೆ. ಸೈಮನ್‌ಗೆ ಸ್ನೇಹಿತರೆಂದರೆ ಪ್ರಾಣ. ಸಿಮೋನಾ ಯಾರೊಡನೆಯಾಗಲಿ, ಒಂದು ಮಿತಿ ದಾಟಿ ಹತ್ತಿರ ಆಗಲಾರಳು; ಅವರು ಹತ್ತಿರವಾಗಲು ಬಂದರೆ ತಾನೇ ದೂರ ಸರಿಯುತ್ತಾಳೆ. ತನ್ನ ಕುಟುಂಬದವರ ಜೊತೆಗೂ ಅಷ್ಟಕ್ಕಷ್ಟೆ. ಯಾರ ಜೊತೆಗೂ ಹೃದಯ ಬಿಚ್ಚುವುದಿಲ್ಲ. ಹಂಚಿಕೊಳ್ಳುವುದೆಂದರೆ ಆಕೆಗೆ ಅಭದ್ರತೆ ಕಾಡುತ್ತದೆ. ಒಂದು ಸಲ ಒಬ್ಬಳು ಸಹಪಾಠಿ ಹುಡುಗಿಯೊಂದಿಗೆ ರಾತ್ರಿ ಪ್ರಯಾಣ ಮಾಡುವಾಗ ತನ್ನ ಬಗೆಗೆ ಎಲ್ಲವನ್ನೂ ಹೇಳಿಕೊಂಡಳು. ನಂತರ ಅವಳಿಗೆ ಏನೆನ್ನಿಸಿತೋ ಏನೋ, ಸಹಪಾಠಿಗೆ ಕರೆಮಾಡಿದಳು. ನಿನ್ನೆ ಮಾತಾಡಿದೆನಲ್ಲ, ಅದು ಯಾವುದೂ ನನ್ನ ಕಥೆಯಲ್ಲ, ನನ್ನ ಗೆಳತಿಯದು. ನಿನ್ನ ಅಭಿಪ್ರಾಯ ಏನು ಅಂತ ತಿಳಿಯಲು ಮಾತಾಡಿದೆ ಅಷ್ಟೆ. ಅದನ್ನೆಲ್ಲ ಮರೆತುಬಿಡು. ನಂತರ ಆ ಸಹಪಾಠಿ ಇವಳ ಬ್ಯಾಚ್‌ನಲ್ಲಿ ಇದ್ದರೂ ಅವಳೊಡನೆ ಬೆರೆಯದೆ ದೂರ ಉಳಿದಿದ್ದಾಳೆ.

ಸೈಮನ್ ಹಾಗೂ ಸಮೋನಾ ಇಬ್ಬರೂ ಒಂದೇ ಆಫೀಸಿನಲ್ಲಿ ಕೆಲಸ ಮಾಡುವುದರಿಂದ ಭೇಟಿಯಾಗಲು ಸಾಕಷ್ಟು ಸಮಯವಿದೆ. ಶನಿವಾರವಂತೂ ಇಡೀ ದಿನ ಒಟ್ಟಿಗಿರುವುದು ಇದ್ದದ್ದೆ. ಶರೀರ ಸಂಪರ್ಕವೂ ಹಲವು ಸಲ ನಡೆದಿದೆ. ಆದರೂ ತಾವು ಪರಸ್ಪರರ ಮನಸ್ಸು ಕೂಡಿಲ್ಲ ಎಂಬ ಸಂದೇಹ ಇಬ್ಬರಿಗೂ ಇದೆ. ಮದುವೆ ಆಗಲು ಇದೇ ಅಡ್ಡಿಯೇನೋ. ಅದಕ್ಕೇ ನನ್ನ ಹತ್ತಿರ ಬಂದಿದ್ದಾರೆ.

ಸೌಹಾರ್ದತೆಯಿಂದ ಬರಮಾಡಿಕೊಂಡ ನಂತರ ಅವರಿಬ್ಬರ ನಡುವೆ ಏನು ನಡೆಯುತ್ತಿದೆ ಎಂದು ಕೇಳಿದೆ. ಇಬ್ಬರೂ ಒಟ್ಟಿಗಿರುವಾಗ ಇವನು ತನ್ನ ಆಗು ಹೋಗುಗಳ ಬಗೆಗೆ ಹೇಳಿಕೊಳ್ಳುತ್ತಾನೆ. ತಮಾಷೆಯಾಗಿ ಮಾತಾಡುತ್ತಾನೆ. ಅವಳೂ ಸ್ಪಂದಿಸುತ್ತಾಳೆ. ಅದಕ್ಕಿಂತ ಹತ್ತಿರವಾಗಲು ಹೋದಾಗ ಅವಳು ಎಲ್ಲೋ ತಡೆಯುತ್ತಾಳೆ ಎಂದು ಸೈಮನ್‌ಗೆ ಅನ್ನಿಸುತ್ತದೆ. ಎಲ್ಲೋ ಒತ್ತಟ್ಟಿಗೆ ಅವಳ ಹಾರ್ದಿಕತೆ ಕ್ಷೀಣವಾಗುತ್ತದೆ. ಅವನು ನಿಕಟವಾದಷ್ಟು ಅವಳು ಆಗುವುದಿಲ್ಲ. ಆಗ ಅವನು ತನ್ನ ಬಗೆಗೆ– ಅವನೇ ಹೇಳುವ ಹಾಗೆ– ಸೆಲ್ಫ್ ಕಾನ್ಷಿಯಸ್ ಆಗುತ್ತಾನೆ. ಅವನು ಮೈಮರೆತು ಭಾವುಕವಾಗಿ, ನಿನ್ನನ್ನು ಬಿಟ್ಟಿರಲು ಸಾಧ್ಯವಿಲ್ಲ, ನೀನೇ ನನ್ನ ಸರ್ವಸ್ವ ಇತ್ಯಾದಿ ಆಡುವಾಗ ಅವಳು ಅದನ್ನು ಒಪ್ಪಿಕೊಳ್ಳುತ್ತಾಳೆಯೇ ವಿನಾ ಉತ್ಕಟತೆಯಿಂದ ಪ್ರತಿಸ್ಪಂದಿಸುವುದಿಲ್ಲ. ಹೃದಯ ಮುಟ್ಟುವ ಮಾತು ನಿರ್ಣಾಯಕ ಘಟ್ಟಕ್ಕೆ ಮುಟ್ಟುವ ಸಮಯಕ್ಕೆ ಸರಿಯಾಗಿ ಅವಳು ಸಮಯ ನೋಡುತ್ತ, ನನಗೆ ತಡವಾಯಿತು, ನಡೆಯೋಣವೆ? ಎಂದು ಏಳುತ್ತಾಳೆ. ಇವನಿಗೆ ಹತಾಶೆಯ ಜೊತೆಗೆ ಕೋಪವೂ ಉಕ್ಕುತ್ತದೆ. ಆವಾಗಲೆಲ್ಲ ಇವನು ಕೆಲವು ದಿನ ಮಾತು ಬಿಡುತ್ತಾನೆ.

### ಆಗ ಏನು ನಡೆಯುತ್ತದೆ?

ಅವನು ಮಾತು ಬಿಟ್ಟಾಗಲೆಲ್ಲ ಅವಳು ತಾನೇ ಅನುನಯದಿಂದ ಮಾತಾಡುತ್ತ ಹತ್ತಿರವಾಗುತ್ತಾಳೆ. ಇವನು ಬಯಸಿದರೆ ಕಾಮಕ್ರಿಯೆಗೂ ಒಪ್ಪುತ್ತಾಳೆ. (ಇವನ ಪ್ರಕಾರ) ರೋಚಕವಾದ ಕಾಮಕ್ರಿಯೆ ನಡೆಯುತ್ತದೆ. ಆಮೇಲಾದರೂ ಅವಳು ಮನಸ್ಸು ಬಿಚ್ಚಬಹುದೇನೋ ಎಂದು ನಿರೀಕ್ಷಿಸುವಾಗ ಅವಳು ಮತ್ತೆ ಅಷ್ಟಕ್ಕಷ್ಟೆ ಅನ್ನುವಂತೆ ವರ್ತಿಸುತ್ತಾಳೆ. ಹೀಗೆ ಇವರಿಬ್ಬರ ದೂರ–ಹತ್ತಿರದ ಹಗ್ಗಜಗ್ಗಾಟದಲ್ಲಿ ಅವನನ್ನು ಅವಳು ಸ್ವಲ್ಪ ದೂರವೇ ನಿಲ್ಲಿಸಿದ್ದಾಳೆ.

ಇದರಿಂದ ಬೇಸತ್ತ ಸೈಮನ್ ಸಮೋನಾಳನ್ನು ಅಂತಿಮ ನಿರ್ಧಾರದತ್ತ ತಳ್ಳುತ್ತಿದ್ದಾನೆ. ಅವಳ ಮನಸ್ಸಿನ ಕೋಟೆಗೋಡೆ ಅವನಿಗೆ ಹಿಡಿಸುತ್ತಿಲ್ಲ. ಅವನ ಅತಿಕ್ರಮಣ ಅವಳಿಗೆ ಹಿಡಿಸುತ್ತಿಲ್ಲ. ಹಾಗಾಗಿ ಅಂತರ ಹಾಗೆಯೇ ಉಳಿದಿದೆ. ಅವಳ ಬೆನ್ನು–ಬಿಡುವುದಿಲ್ಲ–ಕೈಗೆ–ಸಿಗುವುದಿಲ್ಲ ಎನ್ನುವ ಆಟವನ್ನು ಇವನು ಕೊನೆಗೊಳಿಸುವ ಪಣ ತೊಟ್ಟಿದ್ದಾನೆ. ಮೊನ್ನೆ ಸಂಭೋಗದ ನಂತರ ಸಾಕಷ್ಟು ಸಮಯವಿತ್ತು. ಅವಳು ಅವನ ಎದೆಯ ಮೇಲೆ ಒರಗಿದ್ದಳು. ಅವನು, ಯಾಕೆ ನನ್ನ ಜೊತೆಗೆ ಹೆಚ್ಚು ಮಾತಾಡುವುದಿಲ್ಲ? ಎಂದ. ಆಕೆ ಉತ್ತರಿಸದೆ ಬಟ್ಟೆ ಧರಿಸಲು ಎದ್ದಾಗ ಬಟ್ಟೆ ಬಿಡದೆ ಪಟ್ಟುಹಿಡಿದ. ಅವಳು ಇವನನ್ನೇ ನೇರವಾಗಿ ನೋಡುತ್ತ, ಹೆಚ್ಚು ಯಾಕೆ ಮಾತಾಡಬೇಕು? ಎಂದಷ್ಟೇ ಉತ್ತರ ಕೊಟ್ಟಾಗ ಅವನ ಮುಖದ ಮೇಲೆ ಉಂಟಾದ ಗೊಂದಲ ನೋಡಬೇಕಿತ್ತು. ಇವನು ಜಗಳಕ್ಕೆ ಹಚ್ಚಿದ. ಅವಳು ಮರುಮಾತಾಡದೆ ಜಾಗ ಬಿಟ್ಟಳು. ಇವನು ತಲೆ ಚಚ್ಚಿಕೊಂಡ.

ಇವರಿಬ್ಬರ ವಿಭಿನ್ನ ನಂಟುಗಳ ತಾಕಲಾಟದಲ್ಲಿ ಏನು ನಡೆದಿದೆ? ಭದ್ರಭಾವದ ಸೈಮನ್ ಅನ್ಯೋನ್ಯತೆ ಸಿಕ್ಕೇ ಸಿಗುವ ಖಾತರಿಯಿಂದ ಮುಂದುವರಿಯುತ್ತಾನೆ. ಅವಳು ಬೇಡವೆಂದರೆ? ಅಡ್ಡಿಯಿಲ್ಲ, ಮುಂದೆಯಾದರೂ ಒಪ್ಪುತ್ತಾಳೆ, ಅಲ್ಲಿಯ ತನಕ ಕಾಯಬೇಕಷ್ಟೆ. ಆದರೆ ಸಿಮೋನಾ? ನಂಬಿದವರು ಕೈಬಿಡಬಹುದು ಎಂಬ ಭಯ ಅವಳ ಮನದಾಳದಲ್ಲಿದೆ. ಹಾಗಾಗಿ ಯಾರು ಕೈಬಿಟ್ಟರೂ ತನ್ನನ್ನು ತಾನು ಬಿಡಕೂಡದು, ತನಗೆ ತಾನೇ ಆಧಾರ ಎಂಬ ಏಕಾಂಗಿತನದ ಭಾವನಿರ್ಧಾರ ಅವಳದು. ಸೈಮನ್‌ನೊಂದಿಗೆ ಮೈಮನ ಮರೆತು ಒಂದಾಗಲು ಅವಳಿಗೂ ಇಷ್ಟ. ಆದರೆ ಹತ್ತಿರವಾದ ಅವನು ತನ್ನನ್ನು ಅಲಕ್ಷಿಸಿದರೆ? ಆ ನೋವು ಅಸಹನೀಯ. ಅಲ್ಲದೆ, ಅವನನ್ನು ಪೂರ್ತಿ ನಂಬುವುದೆಂದರೆ ತನ್ನನ್ನು ತಾನು ನಂಬುವುದನ್ನು ಬಿಟ್ಟಹಾಗೆ– ಸ್ವಂತ ಶಕ್ತಿಯನ್ನೇ, ಸ್ವಂತಿಕೆಯನ್ನೇ ಕಳೆದುಕೊಂಡಂತೆ ಭಾಸವಾಗುತ್ತದೆ. ಅವನ ಹೆಗಲಮೇಲೆ ಕುಳಿತಂತೆ ಅನ್ನಿಸಿ ಕೆಳಗಿಳಿಯಲು ಧಾವಿಸುತ್ತಾಳೆ. ಹಾಗಾಗಿ ತನಗೆಷ್ಟು ಬೇಕೋ ಅಷ್ಟುಮಾತ್ರ ಹತ್ತಿರ ಇರುವುದು ಸುರಕ್ಷಿತವಲ್ಲವೆ? ತಿರಸ್ಕೃತವಾದರೆ ತನ್ನ ಭದ್ರಸ್ಥಾನಕ್ಕೆ ಹಿಂದಿರುಗಬಹುದಲ್ಲ? ಹಾಗೆಂದು ಒಬ್ಬಳಿರುವಾಗ ಒಂಟಿತನ ಕಾಡುತ್ತದೆ. ಅದರಿಂದ ಹೊರಬರಲು ಇರುವ ಅರ್ಹ ಸಂಗಾತಿ ಸೈಮನ್ ಮಾತ್ರ. ಹೀಗಾಗಿ ಅವನು ಬೇಕೇಬೇಕು. ಸಮಸ್ಯೆ ಏನೆಂದರೆ, ಅವನು ತೀರ ಮೈಮೇಲೆ ಬೀಳುತ್ತಾನೆ. ಮೈಮೇಲೆ ಬಿದ್ದರೆ ಏನೋ ತಡೆದುಕೊಳ್ಳಬಹುದು. ಮನಸ್ಸಿನ ಮೇಲೆ ಬಿದ್ದರೆ? ತನ್ನ ಖಾಸಗೀತನದ ಅತಿಕ್ರಮಣ ಎಂದೆನಿಸಿ ದೂರ ತಳ್ಳುತ್ತಾಳೆ.

ಸಮೋನಾಳ ಮನದಾಳ ಎಲ್ಲರಿಗೂ ಅರ್ಥವಾಗಲಿಕ್ಕಿಲ್ಲ. ಇದು ಹೇಗೆ ಅಂತ ಒಂದು ಉದಾಹರಣೆಯ ಮೂಲಕ ವಿವರಿಸುತ್ತೇನೆ: ನೀವು ಕಾಲು ನೋವೆಂದು ನಿಧಾನವಾಗಿ ನಡೆಯುತ್ತಿದ್ದೀರಿ ಎಂದುಕೊಳ್ಳಿ. ಆಗ (ಪರಿಚಿತ) ಬಲಶಾಲಿ ವ್ಯಕ್ತಿಯೊಬ್ಬ ನಿಮ್ಮನ್ನು ತನ್ನ ಎರಡೂ ತೋಳುಗಳಲ್ಲಿ ಮಗುವನ್ನು ಎತ್ತಿಕೊಳ್ಳುವಂತೆ ಎತ್ತಿಕೊಂಡು ಸರಸರನೇ ಸಾಗಿದ ಎಂದುಕೊಳ್ಳಿ. ಏನು ಮಾಡುತ್ತೀರಿ? ಅವನು ಭದ್ರವಾಗಿ ಹಿಡಿದಿದ್ದರೂ ನೀವು ಕೆಳಗಿಳಿಯಲು ಒದ್ದಾಡುತ್ತೀರಿ. ಯಾಕೆ? ನಿಮ್ಮ ಕಾಲಮೇಲೆ ನಿಲ್ಲದ ಅಭದ್ರತೆ ನಿಮ್ಮನ್ನು ಕಾಡುತ್ತದೆ!

ಇದರ ಪರಿಹಾರ ಹೇಗೆ? ಸಮೋನಾ ತನ್ನನ್ನು ತಾನು ಕಳೆದುಕೊಳ್ಳುವ ಭಯವನ್ನು ಸ್ವತಃ ನಿರ್ವಹಿಸುವ ಹೊರಬರುವ ತನಕ ಸೈಮನ್‌ನ ಜೊತೆ ಅನ್ಯೋನ್ಯತೆ ಸ್ಥಾಪಿಸಲು ಸಾಧ್ಯವಿಲ್ಲ. ಹಾಗೆಯೇ, ಸಮೋನಾ ಎಲ್ಲಿ ತನ್ನ ಖಾಸಗಿ ಮಿತಿಯಲ್ಲಿ ಕಳೆದುಹೋಗುವಳೋ ಎಂಬ ಆತಂಕದಿಂದ ಹೊರಬರದ ಹೊರತೂ ಸೈಮನ್‌ನ ಆತಂಕ ಕಡಿಮೆಯಾಗುವುದಿಲ್ಲ!

ಇಂಥ ಒಂದಕ್ಕೊಂದು ತೊಡಕಿಕೊಂಡ ಸವಾಲುಗಳು ದಾಂಪತ್ಯ ಚಿಕಿತ್ಸೆಯ ಉದ್ದಕ್ಕೂ ಹಾಸುಹೊಕ್ಕಾಗಿವೆ!

ದಾಂಪತ್ಯದ ಬಗೆಗೆ ನಿಮ್ಮ ಅನಿಸಿಕೆ, ಸಮಸ್ಯೆಗಳನ್ನು ಸುಖೀ ದಾಂಪತ್ಯ ವಿಭಾಗ, ನಂ. 75, ಎಂ. ಜಿ. ರಸ್ತೆ, ಬೆಂಗಳೂರು 01 ಇಲ್ಲಿಗೆ ಕಳುಹಿಸಿ. ದಾಂಪತ್ಯ ಸಮಸ್ಯೆಗಳಿಗೆ ಉಚಿತ ಸಹಾಯವಾಣಿ 8494944888 ಗೆ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಬೆಳಿಗ್ಗೆ 11ರಿಂದ ಸಂಜೆ 5ರ ತನಕ ಕರೆಮಾಡಿ.
ಲೇಖಕರ ವಿಳಾಸ: www.medisex.org